# ಗಿರೀಶ್ ಕಾಸರವಳ್ಳಿ ಸಿನೇಮಾಗಳಲ್ಲಿ ಜನಪದ ಕಲೆಗಳು: ಒಂದು ವಿಶ್ಲೇಷಣಾತ್ಮಕ ಅಧ್ಯಯನ

**ಸಂಗೀತಂ ಬಿ.ಜಿ.[1] & ಸತೀಶ್ ಕುಮಾರ್[2]**

[1]ಸಂಶೋಧನಾ ವಿದ್ಯಾರ್ಥಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.

[2]ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.

DOI: https://doi.org/10.5281/zenodo.15123985

## ABSTRACT:

ಪ್ರಸ್ತುತ ಲೇಖನದಲ್ಲಿ ಭಾರತೀಯ ಚಿತ್ರರಂಗದ ಪ್ರಸಿದ್ಧ ಚಲನಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರ ಎರಡು ಪ್ರಸಿದ್ಧ ಸಿನೇಮಾಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದು, ಜನಪದ ಕಲೆಗಳನ್ನು ಸಾಂಸ್ಕೃತಿಕ ಮತ್ತು ಸಾಮಾಜಿಕ ಸ್ಥಿತ್ಯಂತರಗಳ ಮೂಲಕ ಅವರು ಹೇಗೆ ಬಿಂಬಿಸಿದ್ದಾರೆ ಮತ್ತು ಆಳವಾಗಿ ಬೇರೂರಿರುವ ಮಲೆನಾಡಿನ ಗ್ರಾಮೀಣ ಬದುಕಿನ ಸನ್ನಿವೇಶಗಳನ್ನು ಸಿನೇಮಾದ ಮೂಲಕ ಗಿರೀಶ್ ಕಾಸರವಳ್ಳಿ ಹೇಗೆ ಚಿತ್ರಿಸಿದ್ದಾರೆ ಎಂಬುದನ್ನು ಅಧ್ಯಯನ ಮಾಡಲಾಗಿದೆ. ಅವರ ಬಣ್ಣದ ವೇಷ ಮತ್ತು ದ್ವೀಪ ಚಿತ್ರಗಳು ಜನಪದ ಕಲೆಗಳ ಸಾರವನ್ನು ಮತ್ತು ಸಮಕಾಲೀನ ಸಮಸ್ಯೆಗಳೊಂದಿಗೆ ಅವುಗಳ ಪರಸ್ಪರ ಕ್ರಿಯೆಯನ್ನು ಸ್ಪಷ್ಟವಾಗಿ ಸಂಯೋಜಿಸುವ ಮಾದರಿ ಸಿನೇಮಾಗಳಾಗಿವೆ. ಬಣ್ಣದ ವೇಷ ಸಿನೇಮಾ ಮಲೆನಾಡಿನಲ್ಲಿನ ಯಕ್ಷಗಾನದ ಧಾರ್ಮಿಕ ಸಂಪ್ರದಾಯಗಳನ್ನು ನೈಜವಾಗಿ ತೋರಿಸುತ್ತದೆ. ಇದು ಒಂದು ರೋಮಾಂಚಕ ನಾಟಕೀಯ ಕಲಾ ಪ್ರಕಾರವೊಂದರ ಪ್ರಭಾವವನ್ನು, ಆಧುನಿಕತೆಯನ್ನು ಅಳವಡಿಸಿಕೊಂಡ ಹೊಸ ತಲೆಮಾರಿಗೆ ಒಂದು ದಾಖಲೆಯಾಗಿರಬಹುದಾಗುವ ಬಗೆಗೆ ಸಿನೇಮಾ ಮಾತನಾಡುವುದನ್ನು ಪ್ರಸ್ತುತ ಲೇಖನದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಅಂತೆಯೇ ದ್ವೀಪವು ಮುಳುಗಿದ ಹಳ್ಳಿಯ ಹಿನ್ನೆಲೆಯಲ್ಲಿ ತೆರೆದುಕೊಳ್ಳುತ್ತದೆ. ಸ್ಥಳಾಂತರ ಮತ್ತು ಉಳಿವಿನ ಅಸ್ತಿತ್ವದ ಸಂದಿಗ್ಧತೆಗಳೊಂದಿಗೆ ಜನಪದ ಲಕ್ಷಣಗಳನ್ನು ಬಿಂಬಿಸಿದ ಬಗೆಗೆ ಲೇಖನದಲ್ಲಿ ಹೇಳಲಾಗಿದೆ. ಈ ಅಧ್ಯಯನದಲ್ಲಿ ಗುಣಾತ್ಮಕ ವಿಷಯ ವಿಶ್ಲೇಷಣೆ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಸಾಂಸ್ಕೃತಿಕ ನಿರಂತರತೆ, ಸಾಮಾಜಿಕ-ಆರ್ಥಿಕ ಅಸಮಾನತೆಗಳು ಮತ್ತು ಮಾನವನ ಸ್ಥಿತಿಸ್ಥಾಪಕತ್ವದ ವಿಶಾಲ ವಿಷಯಗಳನ್ನು ಪರಿಹರಿಸಲು ಕಾಸರವಳ್ಳಿ ಜನಪದ ಕಲೆಗಳನ್ನು ನಿರೂಪಣಾ ಸಾಧನವಾಗಿ ಮತ್ತು ದೃಶ್ಯರೂಪಕವಾಗಿ ಹೇಗೆ ಬಳಸುತ್ತಾರೆ ಎಂಬುದನ್ನು ಈ ಲೇಖನವು ಪರಿಶೀಲಿಸುತ್ತದೆ. ಸಂಪ್ರದಾಯ ಮತ್ತು ಆಧುನಿಕತೆಯನ್ನು ಸೇತುವೆ ಮಾಡುವ ಚಲನಚಿತ್ರಗಳ ಸಾಮರ್ಥ್ಯವನ್ನು ಅಧ್ಯಯನವು ಎತ್ತಿತೋರಿಸುತ್ತದೆ. ಲೇಖನವು ವೇಗವಾಗಿ ಪರಿವರ್ತನೆಗೊಳ್ಳುತ್ತಿರುವ ಸಮಾಜದಲ್ಲಿ ಜನಪದ ಕಲೆಗಳ ಪ್ರಸ್ತುತತೆಯ ಬಗ್ಗೆ ಕಟುವಾದ ವ್ಯಾಖ್ಯಾನಗಳನ್ನು ಮಾಡುತ್ತದೆ.

**KEYWORDS:**
ಕನ್ನಡ ಸಿನೇಮಾ, ಜನಪದ ಕಲೆಗಳು, ಮೂಢನಂಬಿಕೆ, ಪ್ರಚಾರ.

**ಜನಪದ ಕಲೆಗಳು:**

ಪ್ರಾಚೀನ ಕಾಲದಿಂದಲೂ ಮಾನವನ ಜೊತೆಯಾಗಿ ಬಂದ ಕತೆ, ಹಾಡು, ಗಾದೆ, ಒಗಟು, ಆಟ, ಅಡುಗೆ, ಕುಣಿತ, ವೈದ್ಯ, ನಂಬಿಕೆಗಳನ್ನು ಒಟ್ಟಾಗಿ ಜಾನಪದ ಎಂಬ ಹೆಸರಿನಿಂದ ಕರೆಯುತ್ತಿದ್ದೇವೆ. ಜಾನಪದ ಮಾನವನ ಹುಟ್ಟಿನೊಂದಿಗೆ ತಾನೂ ಹುಟ್ಟಿಕೊಂಡಿದೆ. ಹಾಲಿನಲ್ಲಿ ಅಡಗಿರುವ ಬೆಣ್ಣೆಯಂತೆ ಮಾನವನ ಜೀವನದಲ್ಲಿ ಅವಿನಾಭಾವ ಸಂಬಂಧವನ್ನು ಹೊಂದಿದೆ.

ಎಂ. ಹರ್ಮನ್‌ಕೆನೆತ್ ಮತ್ತು ಮೇರಿಕ್ಲರ್ಕ್. ಜಾನಪದ ಎನ್ನುವುದು ವಾತಾವರಣದಂತೆ ಸಾರ್ವತ್ರಿಕವಾದ ವಿಷಯ, ಅಗೋಚರವಾದರೂ ಬದುಕಿನ ಮೇಲೆ ಪ್ರಭಾವ ಬೀರುವಂಥದ್ದು ಎಂದಿದ್ದಾರೆ. ಎಡ್ವಿನ್ ಸಿಡ್ನಿಹರ್‌ಲ್ಯಾಂಡ್ ಅವರು ಜಾನಪದವನ್ನು ಸಂಪ್ರದಾಯಗಳ ವಿಜ್ಞಾನ ಎಂದು ಕರೆದಿದ್ದಾರೆ. ಪರಂಪರೆಯಾಗಿ ತಲೆಮಾರಿನಿಂದ ತಲೆಮಾರಿಗೆ ಸಾಗಿ ಬಂದ ವಿಷಯ ಅಥವಾ ವಸ್ತುಗಳ ಮೊತ್ತವೇ ಜಾನಪದ. ಒಟ್ಟಿನಲ್ಲಿ ಹೇಳುವುದಾದರೆ ಒಂದು ಸಾಹಿತ್ಯ, ಕಲೆ, ಆಚರಣೆ ಅಥವಾ ಪ್ರದರ್ಶನದಲ್ಲಿ ಮೌಖಿಕಗುಣ, ಪಳೆಯುಳಿಕೆ, ಸಾಮೂಹಿಕ ಸೃಷ್ಟಿ, ಪರಂಪರೆ, ಇವುಗಳಲ್ಲಿ ಯಾವುದಾದರೂ ಕೆಲವು ಲಕ್ಷಣಗಳಿದ್ದರೂ ಅದನ್ನು ಜಾನಪದವೆಂದು ಕರೆಯಬಹುದಾಗಿದೆ.

ಆರಾಧನೆ ಮತ್ತು ಆಚರಣೆಗಳ ಕ್ರಿಯೆಗಳೇ ಕಲೆಗಳಾಗಿ ವಿಕಸನ ಹೊಂದಿ ಪೂರ್ಣ ಸ್ವರೂಪದ ಕಲೆಗಳಾಗಿದ್ದು ಒಂದು ಬಗೆಯಾದರೆ, ಧರ್ಮ ಅಥವಾ ಪಂಥ ಪ್ರಸಾರಕ್ಕಾಗಿ ಹುಟ್ಟಿದ ಕಲೆಗಳು ನಂತರ ಧರ್ಮ ಪಂಥಗಳ ಉದ್ದೇಶ ಮೀರಿ ಸಾರ್ವಜನಿಕ ಕಲೆಗಳಾಗಿದ್ದು ಇನ್ನೊಂದು ಬಗೆ. ಕಲೆಯೇ ವೃತ್ತಿಯಾಗಿ ನಂತರ ಅದೊಂದು ಪರಂಪರೆಯಾಗಿ ಬೆಳೆದದ್ದು ಒಂದು ಬಗೆಯಾದರೆ ಇರುವ ವ್ಯವಸ್ಥೆಗೆ ಪ್ರತಿಭಟನೆಯಾಗಿ ಹೊಸ ಕಲೆಗಳೇ ಹುಟ್ಟಿಕೊಂಡದ್ದು ಮತ್ತೊಂದು ಬಗೆ. ಕರ್ನಾಟಕದಲ್ಲಿ ಆರಾಧನೆಯ ಕಲೆಗಳಿವೆ, ಧರ್ಮ ಪ್ರಸಾರದ ಕಲೆಗಳಿವೆ. ವೃತ್ತಿ ಗಾಯಕರ ಕಲೆಗಳಿವೆ. ಕೃಷಿಗೆ ಸಂಬಂಧಿಸಿದ ಕಲೆಗಳಿವೆ, ನೀತಿರೂಪದ ಕಲೆಗಳಿವೆ, ಶುದ್ಧ ಮನರಂಜನೆಯ ಕಲೆಗಳಿವೆ. ರಂಗಭೂಮಿ ಕಲೆಗಳಿವೆ ಮತ್ತು ನಿಸರ್ಗದ ಕೊಡುಗೆಯೆನ್ನಬಹುದಾದ ಈ ಮೇಲಿನವೆಲ್ಲದಕ್ಕೂ ಭಿನ್ನವಾದ ಗಿರಿಜನರ ಕಲೆಗಳಿವೆ.

**ಕನ್ನಡ ಸಿನೇಮಾ:**

ಸಿನೇಮಾ ಒಂದು ಒಕ್ಕೂಟ ಕಲೆ. ಅನೇಕ ಕಲೆಗಳ ಸಂಯೋಜನೆಯಿಂದಾಗಿ

ಸಿನೇಮಾ ಸೃಷ್ಠಿಯಾಗುತ್ತದೆ. ಸಿನೇಮಾದ ಶಕ್ತಿ ಅಪಾರವಾದುದು. ಜನರನ್ನು ತಲುಪುವ ಮತ್ತು ಅವರ ಮೇಲೆ ಪ್ರಭಾವ ಬೀರುವ ದೃಷ್ಟಿಯಿಂದ ಈ ಮಾತನ್ನು ಒಪ್ಪಬಹುದಾಗಿದೆ.

ಭಾರತ ಹಬ್ಬಗಳ ದೇಶ. ಸಿನೇಮಾ ಕೂಡಾ ಅದರಲ್ಲಿ ಒಂದು. ಬೇರೆ ಯಾವುದೇ ಹಬ್ಬದಂತೆ ಸಿನೇಮಾ ಪ್ರತೀ ದಿನ ಮಿಲಿಯನ್‌ಗಟ್ಟಲೆ ಜನರಿಗೆ ಮನರಂಜನೆ ಮತ್ತು ಶಿಕ್ಷಣ ನೀಡುತ್ತದೆ. ಪ್ರತೀ ಶುಕ್ರವಾರ ಭಾರತೀಯರು ಹೊಸ ಸಿನೇಮಾಗಳ ಪ್ರದರ್ಶನವನ್ನು ಸಂಭ್ರಮಿಸುತ್ತಾರೆ. ಅಸಂಖ್ಯ ಸಂಖ್ಯೆಯ ಜನ ಸಿನೇಮಾ ಮಂದಿರಗಳಿಗೆ ಭೇಟಿ ನೀಡಿ ಸಿನೇಮಾ ವೀಕ್ಷಿಸುತ್ತಾರೆ. ದೇಶದಲ್ಲಿ ಪ್ರತೀ ವರ್ಷ 1200ಕ್ಕೂ ಹೆಚ್ಚು ಸಿನೇಮಾಗಳು ಬಿಡುಗಡೆಯಾಗುತ್ತವೆ. ಕನ್ನಡದಲ್ಲೇ ಪ್ರತೀ ವರ್ಷ ನೂರಕ್ಕೂ ಹೆಚ್ಚು ಚಿತ್ರಗಳು ತಯಾರಾಗುತ್ತವೆ. ಆರಂಭದ ದಿನಗಳಲ್ಲಿ ಸಿನೇಮಾಗಳಲ್ಲಿ ಪುರಾಣದ ಕಥೆಗಳನ್ನು ಬಳಸಲಾಗುತ್ತಿತ್ತು. ನಂತರ ಐತಿಹಾಸಿಕ ಮತ್ತು ಸಾಮಾಜಿಕ ಕಥೆಗಳು ಬಂದವು. ಇಂತಹ ಸಿನೇಮಾಗಳಲ್ಲಿ ಜನಪದ ಅಂಶಗಳನ್ನು ಕಾಣಬಹುದು. ಈ ಸಿನೇಮಾಗಳು ಜನಪ್ರಿಯ ಸಿನೇಮಾಗಳಿಂದ ಭಿನ್ನವಾಗಿ ಗುರುತಿಸಿಕೊಂಡಿರುವುದನ್ನು ಕಾಣಬಹುದು. (ರಾಮಚಂದ್ರಪ್ಪ, ಬಿ, 2004) ಸಿನೇಮಾ ಎಂಬ ಝಗಮಗಿಸುವ ತಾರಾಲೋಕದ ಬಾಗಿಲು ತೆಗೆದವರು ಫ್ರಾನ್ಸಿನ ಲ್ಯೂಮಿಯರ್ ಸಹೋದರರು. ಭಾರತೀಯ ಚಲನಚಿತ್ರರಂಗದಲ್ಲಿ ಅನೇಕ ಪರಿಕಲ್ಪನೆಯ ಸಿನೇಮಾಗಳು ಈಗಾಗಲೇ ಬಂದಿವೆ. ಅದರಲ್ಲೂ ಚಲನಚಿತ್ರರಂಗ 1935ರಿಂದ ವಿಭಿನ್ನ ತರಹದ ಸಿನೇಮಾಗಳನ್ನು ನಿರ್ಮಿಸುತ್ತಾ ಬಂದಿದೆ. ಹೀಗೆ ಬಂದಂತಹ ಸಿನೇಮಾಗಳು ಜನರ ಸಾಮಾಜಿಕ ಸ್ಥಿತ್ಯಂತರಗಳನ್ನು ಎಳೆ–ಎಳೆಯಾಗಿ ವಿಭಿನ್ನ ನೆಲೆಗಳಲ್ಲಿ ಚಿತ್ರಿಸಿವೆ. ಕಲೆ ಎಂಬುದು ಮೊಟ್ಟ ಮೊದಲಿಗೆ ಜನಪದರಿಂದ ಬಂದಿತು. ಬರುಬರುತ್ತಾ ಜಾನಪದವಾಗಿ ನಂತರ ಅವುಗಳಿಗೊಂದು ವೇದಿಕೆ ಸೃಷ್ಟಿಯಾಗಿ ಜನಪದ ಕಲೆಗಳಾದವು, ನಂತರ ವಿಭಿನ್ನ ತರಹದ ನಾಟಕಗಳು ಜನರನ್ನು ರಂಜಿಸತೊಡಗಿದವು. ಕಂಪನಿ ನಾಟಕಗಳು, ಶಿಷ್ಟಬದ್ಧವಾದ ವೇದಿಕೆ ನಾಟಕಗಳು, ಬೀದಿ ನಾಟಕಗಳು ಹೀಗೆ ವಿಭಿನ್ನ ಬಗೆಯ ನಾಟಕಗಳು ಜನರನ್ನು ರಂಜಿಸಿದವು. ಇದೇ ವೇಳೆಗೆ ಕನ್ನಡದ ಮೊದಲ ಟಾಕಿ ಎಂದು ಸತಿ ಸುಲೋಚನಾ ಸಿನೇಮಾ ಹೆಸರಾಯಿತು. ಸಾಹಿತಿ, ಜನಪದ ತಜ್ಞರಾದ ಚಂದ್ರಶೇಖರ ಕಂಬಾರರು ಹೇಳಿದಂತೆ 'ಪ್ರತೀ ಕಲೆಗೆ ಮೂಲ ಜನಪದವೇ'. ಜನಪದದಿಂದ ಮುಂದುವರೆದು ನಾಟಕ, ಸಿನೇಮಾಗಳು ದೊಡ್ಡ ಮಟ್ಟದಲ್ಲಿ ಜನರನ್ನು ತಲುಪಿದವು ಸ್ಪಷ್ಟ ಜನಪದ ಕಲೆಗಳನ್ನು ಸಿನೇಮಾಗಳಲ್ಲಿ ಬಳಸಿಕೊಳ್ಳಲಾಯಿತು. ಇಂತಹ ಜನಪದ ಕಲೆಗಳು ಸಿನೇಮಾಗಳಲ್ಲಿ ಬಂದಾಗ ಅದೊಂದು ಒಳ್ಳೆಯ ದಾಖಲೆಗಳಾಗಿ ಉಳಿಯುತ್ತವೆ. ಪ್ರತೀ ಸಿನೇಮಾಗಳು ಜನಪದವನ್ನು ಮೂಲವಾಗಿರಿಸಿಕೊಂಡು ನಂತರ ಅವುಗಳು ಆಧುನೀಕರಣದ ಅಂಶಗಳನ್ನು

ಅಳವಡಿಸಿಕೊಂಡಿರುವುದು ಸಾರ್ವಜನಿಕ ಸತ್ಯವಾಗಿದೆ.(ರಾವ್. ಜಿ. ಎನ್, 2020)

**ಗಿರೀಶ್ ಕಾಸರವಳ್ಳಿ:**

ಗಿರೀಶ್ ಕಾಸರವಳ್ಳಿ ಅವರು ಮಾನವನ ಸಹಜ ಬದುಕು ಮತ್ತು ನೈಜ ಕೌಟುಂಬಿಕ ಜನಜೀವನವನ್ನು ಸೃಜನಾತ್ಮಕವಾಗಿ ತೆರೆಯ ಮೇಲೆ ಚಿತ್ರಿಸುವ ಉತ್ತಮ ನಿರ್ದೇಶಕ. ಔಷಧ ವಿಷಯದಲ್ಲಿ ಪದವಿ ಪಡೆದ ಇವರು ನಂತರ ಪುಣೆಯ ರಾಷ್ಟ್ರೀಯ ಚಲನಚಿತ್ರ ತರಬೇತಿ ಸಂಸ್ಥೆಯಲ್ಲಿ ನಿರ್ದೇಶನ ಪದವಿ ಪಡೆದರು. ಇವರು ನಿರ್ದೇಶಿಸಿದ್ದು ಕೇವಲ 14 ಚಲನಚಿತ್ರಗಳಷ್ಟೇ. ಆದರೆ ಇವರ ನಿರ್ದೇಶನದ ಅನೇಕ ಚಿತ್ರಗಳು ರಾಜ್ಯ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ಪಡೆದಿವೆ. ಮೂಲತಃ ಮಲೆನಾಡಿನ ಪುಟ್ಟ ಗ್ರಾಮದಲ್ಲಿ ಜನಿಸಿದ ಇವರು ಅನೇಕ ಸಿನೇಮಾಗಳನ್ನು ಮಲೆನಾಡು ಮತ್ತು ಕರಾವಳಿ ಜನ-ಜೀವನವನ್ನು ಆಧರಿಸಿ, ಕನ್ನಡದ ಪ್ರಸಿದ್ಧ ಕವಿಗಳ ಕಥೆ, ಕಾದಂಬರಿಗಳನ್ನಾಧರಿಸಿ ಮಾಡಿದ್ದಾರೆ. ಇವರು ವಾಣಿಜ್ಯ ಉದ್ದೇಶದಿಂದ ಸಿನೇಮಾವನ್ನು ನಿರ್ದೇಶಿಸಿದ್ದಕ್ಕಿಂತ ಜನಪರವಾದ ಸಮಾಜದ ನೈಜ ಚಿತ್ರಣವನ್ನು ಅದ್ಭುತವಾಗಿ ತೆರೆಯ ಮೇಲೆ ತಂದಿದ್ದಾರೆ. ಇವರ ಸಿನೇಮಾಗಳು ಸಮಾಜಮುಖಿ, ಸಮಾಜದ ಮೇಲು ಕೀಳು ವ್ಯವಸ್ಥೆ, ಆಧುನೀಕತೆ ಮತ್ತು ಅಭಿವೃದ್ಧಿಯಿಂದಾಗುವ ಅನಾಹುತಗಳು, ಮೂಲ ನಾಡಿನ ಸಂಸ್ಕೃತಿ, ಆಯಾ ಕಾಲಘಟ್ಟದ ಜನಪದ ಕಲೆಗಳ ಅನಾವರಣ ಇಂತಹ ಹಲವಾರು ಪ್ರಮುಖವಾದ ನೆಲಗಳಲ್ಲಿ ಸಿನೇಮಾಗಳನ್ನು ತಯಾರಿಸುವ ಒಬ್ಬ ಸೃಜನಶೀಲ ನಿರ್ದೇಶಕ ಗಿರೀಶ್ ಕಾಸರವಳ್ಳಿ.

ಘಟಶ್ರಾದ್ಧ, ಆಕ್ರಮಣ, ಮೂರು ದಾರಿಗಳು, ತಬರನಕಥೆ, ಬಣ್ಣದ ವೇಷ, ಮನೆ, ಕ್ರಪರ್ಯ, ತಾಯಿ ಸಾಹೇಬ, ದ್ವೀಪ, ಹಸೀನಾ, ನಾಯಿ ನೆರಳು, ಗುಲಾಬಿ ಟಾಕೀಸ್, ಕನಸೆಂಬ ಕುದುರೆಯನೇರಿ, ಕೂರ್ಮಾವತಾರ, ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ ಎಂಬ 15 ವಿಭಿನ್ನ ಸಿನೇಮಾಗಳನ್ನು ನಿರ್ದೇಶಿಸಿದ್ದಾರೆ. ಆಕಾಶ ಮತ್ತು ಬೆಕ್ಕು ಎಂಬ ಪ್ರೊ. ಯು. ಆರ್. ಅನಂತಮೂರ್ತಿ ಅವರ ಕಥೆಯಾಧಾರಿತ ಸಿನೇಮಾವನ್ನು ನಿರ್ದೇಶಿಸುತ್ತಿದ್ದಾರೆ. ಭಾರತೀಯ ಚಲನಚಿತ್ರರಂಗದಲ್ಲಿ ಸತ್ಯಜಿತ್ ರೈ ಅವರು ನಾಲ್ಕು ಬಾರಿ ಸ್ವರ್ಣ ಕಮಲ ಪ್ರಶಸ್ತಿಯನ್ನು ಪಡೆದದ್ದು ಬಿಟ್ಟರೆ, ನಾಲ್ಕು ಬಾರಿ ಸ್ವರ್ಣ ಕಮಲ ಪ್ರಶಸ್ತಿಯನ್ನು ಪಡೆದ ಇನ್ನೋರ್ವ ನಿರ್ದೇಶಕ ಎಂದರೆ ಅದು ಗಿರೀಶ್ ಕಾಸರವಳ್ಳಿ.

**ಸಾಹಿತ್ಯ ವಿಮರ್ಶೆ:**

Kannada Cinema: Casteism in Girish Kasaravalli's Films 2013ರಲ್ಲಿ ಭಾರತೀಯ ಚಲನಚಿತ್ರ ಉದ್ಯಮಕ್ಕೆ 100 ವರ್ಷಗಳು ತುಂಬಿದವು. ಬಹುತೇಕ ಜನರು ಇದನ್ನು ಬಾಲಿವುಡ್‌ನೊಂದಿಗೆ ಸಂಬಂಧ ಕಲ್ಪಿಸುತ್ತಾರೆ. ಆದರೆ

ಭಾರತದ ಚಲನಚಿತ್ರೋದ್ಯಮದಲ್ಲಿ ಸುಮಾರು ಶೇ. 84ರಷ್ಟು ಚಿತ್ರಗಳನ್ನು ಪ್ರಾದೇಶಿಕ ಚಿತ್ರೋದ್ಯಮಗಳು ಉತ್ಪಾದಿಸುತ್ತವೆ. ವರ್ಷಕ್ಕೆ 125ಕ್ಕೂ ಹೆಚ್ಚು ಚಿತ್ರಗಳನ್ನು ನಿರ್ಮಿಸುವ ಕನ್ನಡ ಚಲನಚಿತ್ರೋದ್ಯಮಕ್ಕೆ ಪ್ರಾಮಾಣಿಕ ವಿಮರ್ಶೆ ಮತ್ತು ಅಧ್ಯಯನದಲ್ಲಿ ತಕ್ಕ ಮಟ್ಟಿನ ಗಮನ ಸಿಕ್ಕಿಲ್ಲ. ಪ್ರಖ್ಯಾತ ಕನ್ನಡ ನಿರ್ದೇಶಕ ಗಿರೀಶ್ ಕಾಸರವಳ್ಳಿ ಸಾಮಾಜಿಕ ಪ್ರಜ್ಞೆಯುಳ್ಳ ಚಿತ್ರಗಳನ್ನು ನಿರ್ಮಿಸುತ್ತಾ ಜಾತ್ಯಾತೀತತೆ, ಲಿಂಗ ಗುರುತು, ಪರಸ್ಪರ ಸಂಬಂಧಗಳು ಹಾಗೂ ಹಿರಿಯರಿಗೆ ನಡೆಯುವ ಹಿಂಸಾಚಾರವನ್ನು ಕಂಡುಕೊಳ್ಳುತ್ತಾರೆ. ಈ ಲೇಖನವು ಘಟಶ್ರಾದ್ಧ, ಬಣ್ಣದ ವೇಷ ಮತ್ತು ತಾಯಿ ಸಾಹೇಬ ಎಂಬ ಮೂರು ಚಿತ್ರಗಳ ವಿಶ್ಲೇಷಣೆ ಮೂಲಕ ಅವರ ಜಾತ್ಯಭಿಮಾನದ ವಿರುದ್ಧದ ದೃಷ್ಟಿಕೋನ ಮತ್ತು ಸಮಾಜದ ಬಗ್ಗೆ ಅವರ ದೃಷ್ಟಿಯನ್ನು ಅನಾವರಣಗೊಳಿಸುತ್ತದೆ.

A GLANCE OVER THE CULTURAL IDENTITY OF DALIT FOLK ARTISTS AND ORAL FOLK EPICS IN KARNA–TAKA. ಈ ಪತ್ರಿಕೆಯು ದಲಿತರ ಸಾಂಸ್ಕೃತಿಕ ಗುರುತನ್ನು ಮತ್ತು ಕರ್ನಾಟಕದಲ್ಲಿ ಮೌಖಿಕ ಜಾನಪದ ಮಹಾಕಾವ್ಯಗಳ ಪಾತ್ರವನ್ನು ಪರಿಶೋಧಿಸುತ್ತದೆ. ಜನಪದ ಕಲೆಗಳು, ರಂಗಭೂಮಿ ಮತ್ತು ಕರಕುಶಲ ಕಲೆಗಳು ದಲಿತ ಸಮುದಾಯಗಳಲ್ಲಿ ತಲೆಮಾರುಗಳ ಮೂಲಕ ಹೇಗೆ ಜೀವಂತ ಸಂಪ್ರದಾಯಗಳಾಗಿವೆ ಎಂಬುದನ್ನು ಇದು ಎತ್ತಿತೋರಿಸುತ್ತದೆ. ಈ ಸಂಪ್ರದಾಯಗಳ ಉದಾಹರಣೆಗಳಲ್ಲಿ ಸನಾದಿ, ಭಜಂತ್ರಿ, ಹಲಗೆ, ರಾಧನಾಥ ಮತ್ತು ಸಂಗ್ಯಾ ಬಾಳ್ಯಾ ದಪ್ಪಿನಾಟ ಇತ್ಯಾದಿ ಸೇರಿವೆ. ಈ ಶ್ರೀಮಂತ ಸಂಪ್ರದಾಯಗಳ ಹೊರತಾಗಿಯೂ, ಯುವ ವಿದ್ಯಾವಂತ ದಲಿತ ಪೀಳಿಗೆಯು ತಾಂತ್ರಿಕ ಪ್ರಗತಿಯಿಂದಾಗಿ ಈ ಅಭ್ಯಾಸಗಳನ್ನು ಮುಂದುವರಿಸಲು ಹಿಂಜರಿಯುತ್ತಿದೆ ಮತ್ತು ಸಾಂಪ್ರದಾಯಿಕ ಜ್ಞಾನದ ಮೆಚ್ಚುಗೆಯಲ್ಲಿ ಕುಸಿತವಿದೆ. ಸಿರಿ ಆರಾಧನೆಯ ಪ್ರದರ್ಶನವು ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿಯೂ ಗಮನಾರ್ಹವಾಗಿದೆ. ಹೆಚ್ಚುವರಿಯಾಗಿ, ಪತ್ರಿಕೆಯು ಶ್ರೀ ಕೃಷ್ಣ ಪಾರಿಜಾತದಂತಹ ಜನಪದ ರಂಗಭೂಮಿಗಳನ್ನು ಮತ್ತು ಬೆಳಗಾವಿ, ಬಾಗಲಕೋಟೆ ಮತ್ತು ಮಹಾರಾಷ್ಟ್ರದ ಕೆಲವು ಜಿಲ್ಲೆಗಳಲ್ಲಿ ಹರಿಜನ ಸಮುದಾಯಗಳು ಪ್ರದರ್ಶಿಸಿದ ಕಿರು ನಾಟಕಗಳನ್ನು (ಸನ್ನಾಟ) ಚರ್ಚಿಸುತ್ತದೆ. ಕನ್ನಡ ಚಲನಚಿತ್ರ ಸನಾದಿ ಅಪ್ಪಣ್ಣ ಸಮಾಜದಲ್ಲಿ ಸಾಂಸ್ಕೃತಿಕ ಅಸ್ಮಿತೆಯ ಪ್ರಾತಿನಿಧ್ಯ ಎಂದು ಉಲ್ಲೇಖಿಸಲಾಗಿದೆ. ಅಧ್ಯಯನವು ದಲಿತರ ಸಾಂಸ್ಕೃತಿಕ ಗುರುತನ್ನು ಮತ್ತು ಕರ್ನಾಟಕದಲ್ಲಿ ಅವರ ಮೌಖಿಕ ಜಾನಪದ ಸಂಪ್ರದಾಯಗಳನ್ನು ಅರ್ಥಮಾಡಿಕೊಳ್ಳುವ ಗುರಿಯನ್ನು ಹೊಂದಿದೆ. ದ್ವಿತೀಯ ಮೂಲಗಳೊಂದಿಗೆ ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕ ವಿಧಾನಗಳನ್ನು ಬಳಸುತ್ತದೆ.

FEATURE FILMS – A CATALYST TO FOLKLORE CULTURE: A STUDY ON HINDI, TAMIL AND MALAYALAM FILMS. ಜನಪದ ಸಾಹಿತ್ಯವು ಚಲನಚಿತ್ರಗಳ ಮೇಲೆ ಆಳವಾದ ಪ್ರಭಾವವನ್ನು ಬೀರುತ್ತದೆ. ಬುದ್ಧಿವಂತಿಕೆಗಿಂತ ಹೆಚ್ಚಾಗಿ ಭಾವನೆಗಳನ್ನು ಆಕರ್ಷಿಸುವ ಮೂಲಕ ವೀಕ್ಷಕರೊಂದಿಗೆ ಆತ್ಮೀಯತೆಯನ್ನು ಸೃಷ್ಟಿಸುತ್ತದೆ. ಸಾಂಪ್ರದಾಯಿಕ ಮೌಲ್ಯಗಳಿಂದ ಸಮೃದ್ಧವಾಗಿರುವ ಭಾರತೀಯ ಜನಪದ ಕಥೆಗಳು ಮಕ್ಕಳಿಗೆ ಆದರ್ಶ ಕಥೆಗಳನ್ನು ತಯಾರಿಸುತ್ತವೆ ಮತ್ತು ತಲೆಮಾರುಗಳ ನಡುವಿನ ಅಂತರವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತವೆ. ಮಿರ್ಜ್ಯಾದಂತಹ ಚಲನಚಿತ್ರಗಳು ಬಾಲಿವುಡ್‌ನಲ್ಲಿ ಜಾನಪದದ ಸಾಮರ್ಥ್ಯವನ್ನು ಎತ್ತಿತೋರಿಸುತ್ತವೆ, ಹೇರಳವಾದ ಬಲವಾದ ನಿರೂಪಣೆಗಳನ್ನು ನೀಡುತ್ತವೆ. ಸಿನಿಮಾ ಸಂಸ್ಕೃತಿಯ ಕಿಟಕಿಯಾಗಿ ಕಾರ್ಯನಿರ್ವಹಿಸುತ್ತದೆ, ಪದ್ಧತಿಗಳು, ಮೌಲ್ಯಗಳು, ಕಲೆಗಳು ಮತ್ತು ಆಧುನೀಕರಣ, ವಸಾಹತುಶಾಹಿ, ರಾಷ್ಟ್ರೀಯತೆ ಮತ್ತು ಮಹಿಳಾ ಸ್ಥಾನಮಾನದಂತಹ ಐತಿಹಾಸಿಕ ಪ್ರಕ್ರಿಯೆಗಳ ಒಳನೋಟಗಳನ್ನು ಒದಗಿಸುತ್ತದೆ. ಅಂತಿಮವಾಗಿ, ಸಿನಿಮಾ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ ಆದರೆ ಅದನ್ನು ರೂಪಿಸುವಲ್ಲಿ ಪಾತ್ರವನ್ನು ವಹಿಸುತ್ತದೆ.

ಈಗಾಗಲೇ ಆದಂತಹ ಅಧ್ಯಯನಗಳೆಲ್ಲವೂ ಸಿನೇಮಾ ಸಂಸ್ಕೃತಿ, ಹಿಂದಿ–ತಮಿಳು–ಮಲೆಯಾಳಮ್ ಜನಪದ ಸಂಸ್ಕೃತಿ, ಸ್ಥಳೀಯ ಭಾಷಾ ಸಂಸ್ಕೃತಿ, ಗಿರೀಶ್ ಕಾಸರವಳ್ಳಿ ಅವರ ಸಿನೇಮಾಗಳಲ್ಲಿ ವಿಮರ್ಶಾತ್ಮಕ ಅಧ್ಯಯನಗಳು ನಡೆದಿವೆ. ಆದರೆ ಗಿರೀಶ್ ಕಾಸರವಳ್ಳಿ ಅವರ ಸಿನೇಮಾದಲ್ಲಿ ಜನಪದ ಕಲೆಗಳ ಬಳಕೆ ಎಂಬ ವಿಷಯದ ಕುರಿತಾಗಿ ಎಲ್ಲಿಯೂ ಅಧ್ಯಯನ ನಡೆದಿಲ್ಲ. ಪ್ರಸ್ತುತ ಈ ಅಧ್ಯಯನದಲ್ಲಿ ಗಿರೀಶ್ ಕಾಸರವಳ್ಳಿ ಅವರ ಆಯ್ದ ಸಿನೇಮಾಗಳಲ್ಲಿ ಜನಪದ ಕಲೆಗಳು ಬಿಂಬಿತವಾಗಿರುವ ಬಗೆಯನ್ನು ಶೋಧಿಸಲಾಗುತ್ತದೆ. ಈ ನಿಟ್ಟಿನಲ್ಲಿ ಈ ಸಂಶೋಧನೆ ಹಿಂದಿನ ಎಲ್ಲಾ ಸಂಶೋಧನೆಗಿಂತ ಭಿನ್ನವಾಗಿದೆ.

**ಅಧ್ಯಯನ ವಿಧಾನ:**

ಪ್ರಸ್ತುತ ಅಧ್ಯಯನದಲ್ಲಿ ಗಿರೀಶ್ ಕಾಸರವಳ್ಳಿ ಅವರು ನಿರ್ದೇಶಿಸಿದ ಬಣ್ಣದ ವೇಷ ಮತ್ತು ದ್ವೀಪ ಎಂಬ ಎರಡು ಜನಪದ ಕಲಾವಿದರ ಜೀವನವನ್ನೊಳಗೊಂಡ ಸಿನೇಮಾಗಳನ್ನು ಸಂಶೋಧನೆಗಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಇಲ್ಲಿ ಮುಖ್ಯವಾಗಿ ಜನಪದ ಕಲಾವಿದರ ಕುರಿತಾಗಿ ಮಾತನಾಡುವ ಎರಡು ಸಿನೇಮಾಗಳನ್ನು ಉದ್ದೇಶಪೂರಿತ ನಮೂನಾ ವಿಧಾನದ ಮೂಲಕ ಎರಡು ಸಿನೇಮಾಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಗುಣಾತ್ಮಕ ವಿಷಯ ವಿಶ್ಲೇಷಣಾ ವಿಧಾನವನ್ನು

ಬಳಸಿಕೊಳ್ಳಲಾಗಿದೆ.

**ಉದ್ದೇಶಗಳು:**

**ಸಾಮಾನ್ಯ ಉದ್ದೇಶ:** ಗಿರೀಶ್ ಕಾಸರವಳ್ಳಿ ಅವರ ಆಯ್ದ ಚಿತ್ರಗಳಲ್ಲಿ ಇರುವ ಸಂಪೂರ್ಣ ಜನಪದ ಅಂಶಗಳನ್ನು ಕಂಡು ಹಿಡಿಯುವುದು ಈ ಅಧ್ಯಯನದ ಸಾಮಾನ್ಯ ಉದ್ದೇಶವಾಗಿದೆ.

**ನಿರ್ದಿಷ್ಟ ಉದ್ದೇಶಗಳು:**

1. ಗಿರೀಶ್ ಕಾಸರವಳ್ಳಿ ಸಿನೇಮಾಗಳಲ್ಲಿರುವ ಜನಪದ ಕಲೆಗಳು ಮತ್ತು ಇತರ ಅಂಶಗಳನ್ನು ವಿಶ್ಲೇಷಿಸುವುದು.
2. ಅವರ ಸಿನೇಮಾಗಳಲ್ಲಿ ಬಿಂಬಿತವಾದ ಜನಪದ ಕಲೆಗಳ ಪ್ರಾಮುಖ್ಯತೆಯನ್ನು ವಿಮರ್ಶಿಸುವುದು.
3. ಅವರ ಸಿನೇಮಾದಲ್ಲಿ ಬಿಂಬಿತವಾದಂತೆ ಜನಪದ ಸಂದೇಶಗಳನ್ನು ಗುರುತಿಸಿ ವಿಶ್ಲೇಷಿಸುವುದು.

**ವಿಶ್ಲೇಷಣೆ:**

**ಆಯ್ದ ಸಿನೇಮಾಗಳು ಬಿಂಬಿಸಿದ ಜನಪದ ಕಲೆಗಳು:**

ಬಣ್ಣದ ವೇಷ ಸಿನೇಮಾದಲ್ಲಿ ಯಕ್ಷಗಾನದ ವಿವಿಧ ಮೇಳಗಳ ವಿಭಿನ್ನ ಪ್ರಕಾರಗಳನ್ನು ತೋರಿಸಿದ್ದಾರೆ. ಜನಪದ ಕಲೆಗೆ ಬೇಕಾದ ವೇಷಭೂಷಣ ಅದಕ್ಕಿರುವ ಪಾವಿತ್ರ್ಯತೆ, ಯಕ್ಷಗಾನ ಕಲೆಯಲ್ಲಿನ ಜೋಡಾಟ, ಪ್ರಾಣಿಗಳ ಕಥೆ, ದೇವರ ವಿಶೇಷ ವೇಷಗಳು ಹೀಗೆ ಯಕ್ಷಗಾನದ ವಿಭಿನ್ನ ನೆಲೆಗಳನ್ನು ಹೇಳಲಾಗಿದೆ. ವಿಶೇಷವಾಗಿ ಯಕ್ಷಗಾನ ಕಲಾವಿದರಲ್ಲಿ ದೈವ ನರ್ತನೆಯನ್ನು ಸಿನೇಮಾದಲ್ಲಿ ಬಿಂಬಿಸಲಾಗಿದೆ. ಹೀಗೆ ಸಿನೇಮಾದಲ್ಲಿ ಯಕ್ಷಗಾನ ಕಲೆಯಲ್ಲಿನ ಅನೇಕ ಉಪಕಲೆಗಳಾದ ಜುಂಜುಟ್ಟಿ ದೈವ ನರ್ತನ, ಪೌರಾಣಿಕ ಕಥಾನಕಗಳ ಪ್ರದರ್ಶನ, ಯಕ್ಷಗಾನದಲ್ಲಿ ಪ್ರಾಣಿಗಳ ನರ್ತನ, ಇವುಗಳನ್ನು ಬಿಂಬಿಸಿದ್ದಾರೆ. ದ್ವೀಪ ಸಿನೇಮಾದಲ್ಲಿ ಕರ್ನಾಟಕ ರಾಜ್ಯದಲ್ಲಿ ಇರುವ ಘಟ್ಟ ಪ್ರದೇಶದ ಕೆಳಗಿನ ಭೂತಕೋಲದ ಮೂಲ ಸಂಸ್ಕೃತಿ, ನೇಮ, ನಿಷ್ಠೆ, (50:55) ಭತ್ತ ನಾಟಿ ಮಾಡುವ ಹಾಡುಗಳನ್ನು ಬಿಂಬಿಸಿದ್ದಾರೆ.

**ಸಿನೇಮಾದಲ್ಲಿ ಜನಪದ ಕಲೆಗಳನ್ನು ಚಿತ್ರಿಸಿದಾಗ ಬಿತ್ತರವಾದ ಅಂಶಗಳು:**

ಗಿರೀಶ್ ಕಾಸರವಳ್ಳಿಯವರ ಸಿನೇಮಾಗಳಲ್ಲಿ ಜನಪದ ಕಲಾವಿದರ ಬಗೆಗಿನ ಅನೇಕ ಅಂಶಗಳನ್ನು ಬಿಂಬಿಸುವಾಗ ಮುಖ್ಯವಾಗಿ ಜನಪದ ಕಲಾವಿದರ ಚತುರತೆ, ಬುದ್ಧಿವಂತಿಕೆ ಮತ್ತು ಅವರ ಸೃಜನಶೀಲ ಕೌಶಲ್ಯದ ಬಗೆಗೆ ಆಳವಾಗಿ ಬಿಂಬಿಸಿದ್ದಾರೆ. ಬಣ್ಣದ ವೇಷ ಸಿನೇಮಾದಲ್ಲಿ ಯಕ್ಷಗಾನ ಆಡುವ ಸಮಯದಲ್ಲಿ ಶಂಭುವಿಗೆ ತಂಬಾಕು ಹೆಚ್ಚಾಗಿ ಕೆಳಗೆ ಬೀಳುವ ಸಮಯಕ್ಕೆ ಮಾಬಲ ಎಂಬ ಸಹ ನಟ

ಸಂಭಾಷಣೆಯನ್ನು ಸಂಪೂರ್ಣ ಬದಲಿಸಿ ಶಂಭು ಕೆಳಗೆ ಬೀಳುತ್ತಿರುವುದು, ಯಕ್ಷಗಾನ ಕಥಾನಕದ ಒಂದು ಭಾಗವೇ ಆಗಿದೆ ಎಂದು ಆ ಕ್ಷಣದಲ್ಲಿಯೇ ಜನರ ಮುಂದೆ ಪ್ರಚುರಪಡಿಸಿದೆ.

ದ್ವೀಪ ಸಿನೇಮಾದಲ್ಲಿ ಕಾಡನ್ನೇ ಆಶ್ರಯಿಸಿದ್ದ ಜನಪದರು ಸರಳವಾಗಿ ಬದುಕುವ ಮತ್ತು ಪ್ರಕೃತಿಯಿಂದ ಸಿಗುವ ನೈಸರ್ಗಿಕ ವಸ್ತುಗಳನ್ನು ಉಪಯೋಗಿಸಿಕೊಂಡು ಕಲೆಯ ಪ್ರದರ್ಶನ ಮಾಡುವುದನ್ನು ಸಿನೇಮಾದಲ್ಲಿ ಚಿತ್ರಿಸಿದ್ದಾರೆ. ಕೋಲ ಕಟ್ಟಲು ಬೇಕಾದ ವಸ್ತ್ರಾಭರಣವನ್ನು ತಾವೇ ಅದ್ಭುತವಾಗಿ ಸಿದ್ಧಪಡಿಸಿಕೊಳ್ಳುತ್ತಿದ್ದ ಜನಪದ ಕಲಾವಿದರ ಕೌಶಲ್ಯವನ್ನು ಚಿತ್ರಿಸಿದ್ದಾರೆ. ಆ ಕಲೆಗೆ ಕೆಲವು ವಸ್ತುಗಳನ್ನು ಪ್ರತೀ ಸಲವೂ ಹೊಸದಾಗಿ ಕಟ್ಟಬೇಕಾಗುತ್ತದೆ, ಚಿತ್ರದಲ್ಲಿ ಭೂತಕಟ್ಟುವಾಗ ಬೇಕಾಗುವ ಅಡಿಕೆ ಹಿಂಗಾರದ ಬಣ್ಣನೆ ಮತ್ತು ಅನೇಕ ನೈಸರ್ಗಿಕ ಪ್ರಕೃತಿಜನ್ಯ ವಸ್ತುಗಳನ್ನು ವಸ್ತ್ರಾಭರಣಕ್ಕೆ ಅಳವಡಿಸಿಕೊಂಡಿದ್ದನ್ನು ಸಿನೇಮಾದಲ್ಲಿ ಬಿಂಬಿಸಲಾಗಿದೆ. ಇದರ ಜೊತೆಗೆ ಜನಪದರು ಬುಟ್ಟಿ ಹೆಣೆಯುವ ಮತ್ತು ಬೆಳೆಯು ನಷ್ಟವಾದರೆ ಆಹಾರಕ್ಕೆ ಕೊರತೆಯಾಗದಂತೆ ಸೌತೆಕಾಯಿ ಮತ್ತು ಧಾನ್ಯಗಳು ಕೆಡದಂತೆ ಸಂಗ್ರಹಿಸಿಡುವ ಜನಪದರ ಕೌಶಲ್ಯತೆಯನ್ನು ಸಿನೇಮಾದಲ್ಲಿ ಬಿಂಬಿಸಿದ್ದಾರೆ.

**ಜನಪದ ಸಾಹಿತ್ಯ ಮತ್ತು ಸಂಗೀತ:**

ಬಣ್ಣದ ವೇಷ ಸಿನೇಮಾದಲ್ಲಿ ಪೌರಾಣಿಕ ಕಥೆಗಳಾದ ರಾಮಾಯಣ ಮಹಾಭಾರತವನ್ನು ತೋರಿಸಿದ್ದಾರೆ. ಅದನ್ನು ಸಿನೇಮಾದಲ್ಲಿ ಅದ್ಭುತವಾಗಿ ಬಿಂಬಿಸಿದ್ದಾರೆ. ಪೌರಾಣಿಕ ಕಥೆಗಳನ್ನು ಜನರಿಗೆ ತಲುಪಿಸುವ ಒಂದೊಳ್ಳೆಯ ಮಾಧ್ಯಮ ಜನಪದ ಮಾಧ್ಯಮವೆಂದು ಬಣ್ಣದ ವೇಷ ಮಾಧ್ಯಮದಲ್ಲಿ ತೋರಿಸಲಾಗಿದೆ. ಯಕ್ಷಗಾನ ಪ್ರಸಂಗಗಳಲ್ಲಿ ಬಿಂಬಿಸುವ ಹಾಡುಗಳು 80ರ ದಶಕದಲ್ಲಿ ಮಲೆನಾಡಿನ ಯಕ್ಷಗಾನ ಕಲೆಯ ಸಾಹಿತ್ಯ ಸಂಗೀತ ಎಷ್ಟರ ಮಟ್ಟಿಗೆ ಇತ್ತು ಎಂಬುದನ್ನು ಸಿನೇಮಾದಲ್ಲಿ ಬಿಂಬಿಸಲಾಗಿದೆ. ಅದೇ ಸಮಯದಲ್ಲಿ ಯಕ್ಷಗಾನವನ್ನು ಘಟ್ಟ ಪ್ರದೇಶದ ಪ್ರತಿಯೊಬ್ಬರೂ ಜೀವನದ ಒಂದು ಭಾಗವನ್ನಾಗಿಸಿಕೊಂಡಿದ್ದರು ಮತ್ತು ಯಕ್ಷಗಾನ ಕಲೆಯನ್ನು ಪೂಜನೀಯ ಭಾವನೆಯಿಂದ ನೋಡುತ್ತಿದ್ದರು. ಚಿಕ್ಕ ಮಕ್ಕಳು ಸಹಾ ಯಕ್ಷಗಾನವನ್ನು ಮತ್ತು ಅದರ ಸಾಹಿತ್ಯವನ್ನು ಬಿಡುವಿನ ಸಮಯದಲ್ಲಿ ಪಠಿಸುತ್ತಿದ್ದರು. ಚಿಕ್ಕ ಮಕ್ಕಳು ದೊಡ್ಡವರಾದ ಮೇಲೆ ಯಕ್ಷಗಾನ ಕಲಾವಿದರಾಗುವ ಹಂಬಲದಿಂದ ಹಾಡುಗಳನ್ನು ತಾವೇ ಸ್ವತಃ ಹೇಳುವ ಸನ್ನಿವೇಶಗಳನ್ನು ಸಿನೇಮಾದಲ್ಲಿ ಬಿಂಬಿಸಲಾಗಿದೆ. ಭಾಗವತಿಕೆಯನ್ನು ಸಿನೇಮಾದಲ್ಲಿ ಚಿತ್ರಿಸಿದ್ದಾರೆ.

ದ್ವೀಪ ಸಿನೇಮಾದಲ್ಲಿ ಭೂತಕೋಲ ಕಟ್ಟುವ ಕಲೆಯನ್ನು ಒಂದೆಡೆ ತೋರಿಸುತ್ತಾರೆ. ಅದರಲ್ಲಿಯೂ ಕೋಲದ ಸಮಯದಲ್ಲಿ ಹಾಕುವ ಎಲ್ಲಾ ವಸ್ತ್ರಾಭರಣ ಮತ್ತು ಧರಿಸುವ ಸಂಪೂರ್ಣ ಶೈಲಿಯನ್ನು ಅಚ್ಚುಕಟ್ಟಾಗಿ ತೋರಿಸಿದ್ದಾರೆ.

ಅದಲ್ಲದೇ ನಾಟಿ ಮಾಡುವ ಸಂದರ್ಭದಲ್ಲಿ ಮಹಿಳೆಯರು ಹಾಡುವ ಜನಪದ ಹಾಡು ಕೃಷಿ ಕೆಲಸ ಮಾಡುವಾಗ ಆಗುವ ಸುಸ್ತು ಗೊತ್ತಾಗಬಾರದು ಎಂದು ಆ ಸನ್ನಿವೇಶವನ್ನು ಸಿನೇಮಾದಲ್ಲಿ ಚಂದವಾಗಿ ತೋರಿಸಿದ್ದಾರೆ. ಮತ್ತು ಈ ಸಿನೇಮಾದಲ್ಲಿ ಜನಪದ ಕಲೆಗಳು ಜನ್ಮ ತಾಳಲು ಕಾರಣವಾಗಿದ್ದು ಪ್ರಕೃತಿಯೇ ಎಂಬುದು ಸ್ಪಷ್ಟವಾಗಿ ತಿಳಿಯುವಂತೆ ಮಾಡಲಾಗಿದೆ. ಸಿನೇಮಾದಲ್ಲಿ ಇಂತಹ ಸಾಹಿತ್ಯಗಳು ಬಂದಿದ್ದು ನೇರವಾಗಿ ಮಾತಿನಿಂದ, ಮಾತಾಡುತ್ತಾ ಇಂತಹ ಸಾಹಿತ್ಯಗಳು ಒಬ್ಬರಿಂದೊಬ್ಬರಿಗೆ ದಾಟುತ್ತಾ ಸಾಹಿತ್ಯ ಬೆಳೆಯುತ್ತಾ ಹೋಯಿತು. ಸಿನೇಮಾದಲ್ಲಿ ಮುಖ್ಯವಾಗಿ ಜನಪದರ ಮೂಲ ಧಾಟಿಯ ಮಾತುಗಳನ್ನು ಬಿಂಬಿಸಿದ್ದಾರೆ. ಇಂತಹ ಜನಪದರ ಮೂಲ ಪ್ರಕೃತಿಯ ಜೊತೆಗಿನ ಸಂಭಾಷಣೆ ಜೊತೆಗೆ ಜನಪದ ಗಾದೆಗಳನ್ನು ಪ್ರಸ್ತುತ ಸಿನೇಮಾಗಳಲ್ಲಿ ಬಿಂಬಿಸಲಾಗಿದೆ.

**ವಾದ್ಯಗಳು:**

ಬಣ್ಣದ ವೇಷ ಸಿನೇಮಾದಲ್ಲಿ ಡಂಗೂರವನ್ನು ಯಕ್ಷಗಾನದ ಪ್ರಚಾರಕ್ಕಾಗಿ ಬಳಸಿಕೊಂಡಿದ್ದಾರೆ. ಸಿನೇಮಾದಲ್ಲಿ ಆ ಕಾಲಘಟ್ಟದ ಜನರ ಆಸಕ್ತಿ ಎಷ್ಟಿತ್ತು ಎಂಬುದನ್ನು ಡಂಗೂರದ ಮೂಲಕ ಬಿಂಬಿಸಿದ್ದಾರೆ. ನಂತರ ಯಕ್ಷಗಾನ ಆಡಿಸುವ ಸಂದರ್ಭದಲ್ಲಿ ಭಾಗವತರು ಉಪಯೋಗಿಸುವ ತಾಳ ಮದ್ದಲೆಗಳನ್ನು ಸಿನೇಮಾದಲ್ಲಿ ಚಿತ್ರಿಸಿದ್ದಾರೆ. ಅನೇಕ ವಾದ್ಯಗಳನ್ನು ಆಟದ ಆರಂಭಕ್ಕೂ ಮುನ್ನ ಸಜ್ಜುಗೊಳಿಸುವ ಎಲ್ಲಾ ತಯಾರಿಯನ್ನು ಸಿನೇಮಾದಲ್ಲಿ ಬಿಂಬಿಸಿದ್ದಾರೆ, ಮತ್ತು ರಾತ್ರಿಯಿಡೀ ತಾಳ್ಮೆಯಿಂದ ಯಕ್ಷಗಾನ ಮುಗಿಯುವವರೆಗೂ ಸಹಾ ಕಲಾವಿದರು ವಾದ್ಯ ನುಡಿಸುವುದನ್ನು ಸಿನೇಮಾದಲ್ಲಿ ಚಿತ್ರಿಸಿದ್ದಾರೆ.

ದ್ವೀಪ ಸಿನೇಮಾದಲ್ಲಿ ತೆಂಬರೆಯನ್ನು ಬೇಜಾರಾದ ಪ್ರತೀ ಸಂದರ್ಭದಲ್ಲಿಯೂ ಜನಪದರು ಹೆಚ್ಚಾಗಿ ಬಳಸುತ್ತಿದ್ದರು. ಇದನ್ನು ಸಿನೇಮಾದಲ್ಲಿ ಸಂತ್ರಸ್ತ ಕುಟುಂಬವೊಂದು ಪ್ರತೀ ಸಾರಿ ಮನಸಿಗೆ ಘಾಸಿಯಾದಾಗ ಆ ತೆಂಬರೆಯನ್ನು ನುಡಿಸುತ್ತ ತಮ್ಮ ಮನಸ್ಸನ್ನು ತಂಪು ಮಾಡಿಕೊಳ್ಳುತ್ತಿದ್ದರು. ಆ ತೆಂಬರೆಯನ್ನು ಮುಖ್ಯವಾಗಿ ಕೋಲಾ ವೇಷಧಾರಿ ವೇಷ ಧರಿಸಿ ದೈವ ನರ್ತನೆಯನ್ನು ಮಾಡುವಾಗ ನುಡಿಸುತ್ತಿದ್ದರು. ಆ ತೆಂಬರೆ ನುಡಿಸುವುದನ್ನು ಸಿನೇಮಾದಲ್ಲಿ ಬಿಂಬಿಸಿದ್ದಾರೆ. ಕೋಲ ವೇಷದಾರಿಯೊಬ್ಬ ಕುಣಿಯುತ್ತಿರುವಾಗ ಸುತ್ತಲೂ ಐದಾರು ಮಂದಿ ನಿಂತುಕೊಂಡು ಅವರಿಗೆ ತಾಳ ಮದ್ದಲೆಗಳನ್ನು ನುಡಿಸುವ ಪ್ರಸಂಗವನ್ನು ಸಿನೇಮಾದಲ್ಲಿ ತೋರಿಸಲಾಗಿದೆ.

**ಕಲೆಯಲ್ಲಿನ ಶಿಸ್ತು ಬದ್ಧತೆ:**

ಆಯ್ದ ಎರಡೂ ಸಿನೇಮಾಗಳೂ ಸಹಾ ಜನಪದ ಕಲಾವಿದರ ಜೀವನದ ಬಗ್ಗೆ

ಮಾತನಾಡುತ್ತಿವೆ. ಕಲಾವಿದರು ತಮ್ಮ ಜೀವನವನ್ನು ನಿರ್ವಹಣೆ ಮಾಡುವ ಒಂದು ಭಾಗವಾಗಿ ಜನಪದ ಕಲೆಗಳನ್ನು ಆರಾಧಿಸುತ್ತಿದ್ದರು ಎಂಬ ಸೂಕ್ಷ್ಮ ವಿಚಾರವನ್ನು ಸಿನೇಮಾದಲ್ಲಿ ಚರ್ಚಿಸಲಾಗಿದೆ. ಕಲಾವಿದರು ಕಲೆಯನ್ನು ಆರಾಧಿಸುತ್ತಿದ್ದರು ಹೊರತಾಗಿ ಅವರು ಹಣದ ಹಿಂದೆ ಹೋಗುತ್ತಿರಲಿಲ್ಲ ಎಂಬುದನ್ನು ಸಿನೇಮಾದಲ್ಲಿ ಬಿಂಬಿಸಿದ್ದಾರೆ. ಸಿನೇಮಾ ಕಲಾವಿದರ ಶಿಸ್ತು ಬದ್ಧತೆಯನ್ನು ವೇಧಾರಿಯಾದ ನಂತರ ಎಲ್ಲಿಯೂ ಕಲೆಯನ್ನು ಬಿಟ್ಟು ಬೇರೆ ಯಾವ ಕೆಲಸವನ್ನೂ ಮಾಡುತ್ತಿರಲಿಲ್ೌಲ ಕಲೆಯಲ್ಲಿ ಅಷ್ಟೊಂದು ಬದ್ಧತೆಯಿಂದ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದರು. ಹಾಗೆಯೇ ಬಣ್ಣದ ವೇಷ ಸಿನೇಮಾ ಯಕ್ಷಗಾನ ಕಲಾವಿದರು ಎಂದು ಒಮ್ಮೆ ಗುರುತಿಸಿಕೊಂಡರೆ ಅವರು ತಮ್ಮ ಇಡೀ ಜೀವನವನ್ನು ಯಕ್ಷಗಾನ ಕಲಾವಿದರಾಗಿಯೇ ಕಳೆಯುವುದನ್ನು ಮತ್ತು ದ್ವೀಪ ಸಿನೇಮಾದಲ್ಲಿ ಭೂತ ಕಟ್ಟುವ ಕಲಾವಿದನೊಬ್ಬ ಒಮ್ಮೆ ಭೂತ ಕೋಲ ಕಲಾವಿದನಾದರೆ ಆತನು ಸಾಯಲು ಸಿದ್ಧನಿರುತ್ತಾನೆ ಹೊರತು ಕಲೆಯನ್ನು ಶಿಸ್ತು ಮತ್ತು ಬದ್ಧತೆಯಿಂದ ಆಚರಿಸುತ್ತಾನೆ ಎಂಬುದನ್ನು ದುಗ್ಗಪ್ಪ ಎಂಬ ಪಾತ್ರದಿಂದ ಬಿಂಬಿಸಲಾಗಿದೆ.

**ಜನಪದ ಕಲಾವಿದರ ಜೀವನ:**

ಪ್ರತಿಯೊಬ್ಬ ಜನಪದ ಕಲಾವಿದನೂ ಕಲೆಯಲ್ಲಿ ಹೇಗೆ ತನ್ನನ್ನು ತೊಡಗಿಸಿಕೊಂಡದ್ದನ್ನು ಎರಡೂ ಸಿನೇಮಾಗಳಲ್ಲಿ ಬಿಂಬಿಸಲಾಗಿದೆಯೋ ಹಾಗೆಯೇ ಕಲಾವಿದನ ಜೀವನವನ್ನು ಮತ್ತು ಜೀವನದಲ್ಲಿನ ಕಷ್ಟಗಳನ್ನು ಸಿನೇಮಾದಲ್ಲಿ ಎಳೆ-ಎಳೆಯಾಗಿ ಬಿಂಬಿಸಲಾಗಿದೆ. ಸಿನೇಮಾ ಜನಪದ ಕಲಾವಿದರ ಬದುಕು, ಬವಣೆಗಳು, ಅವರ ಬದುಕಿನ ಆಚಾರ ವಿಚಾರ ಅದರಲ್ಲಿಯೂ ಮುಖ್ಯವಾಗಿ ಬಿಡುವಿನ ಸಮಯದಲ್ಲಿ ಜನಪದರು ದನ ಕರುಗಳನ್ನು ಸಾಕುವುದು ಮತ್ತು ಮನೆಕೆಲಸ, ಕೃಷಿ ಕೆಲಸ ಮಾಡುವಾಗ ಜನಪದರ ಜೀವನದ ಒಂದು ಭಾಗವಾದ ಜನಪದ ಕಲೆಗಳನ್ನು ಪ್ರದರ್ಶನ ಮಾಡುವ ಕಲಾವಿದರ ಜೀವನವನ್ನು ಅದರಲ್ಲಿಯೂ ಬಣ್ಣದ ವೇಷ ಸಿನೇಮಾದಲ್ಲಿ ಮಕ್ಕಳು ಕಷ್ಟ ಪಟ್ಟು ಸಿಗುವ ಕೆಲವು ವಸ್ತುಗಳನ್ನು ಬಳಸಿಕೊಂಡು ಯಕ್ಷಗಾನ ಪ್ರಸಂಗವನ್ನು ಅಭ್ಯಾಸ ಮಾಡುವ ಚಿತ್ರಣವನ್ನು ಸೊಗಸಾಗಿ ಗಿರೀಶ್ ಕಾಸರವಳ್ಳಿಯವರು ಅದ್ಭುತವಾಗಿ ಚಿತ್ರಿಸಿದ್ದಾರೆ.

**ಸಿನೇಮಾದಲ್ಲಿ ಜನಪದ ಕಲೆಗಳಿಂದ ಬಂದ ಜನಪದ ಸಂದೇಶ:**

ಬಣ್ಣದ ವೇಷ ಮತ್ತು ದ್ವೀಪ ಸಿನೇಮಾಗಳಲ್ಲಿ ಅನೇಕ ಸಂಗತಿಗಳು ಒಂದೇ ತೆರನಾಗಿ ಬಿಂಬಿಸಿದ್ದಾರೆ. ಜನಪದರ ಮಾನವೀಯ ಗುಣಗಳನ್ನು ಬಿಂಬಿಸಿದ್ದು ಅನೇಕ ಸನ್ನಿವೇಶಗಳಲ್ಲಿ ಎರಡೂ ಸಿನೇಮಾಗಳೂ ಹೊಂದಿಕೆಯಾಗುವಂತಿದೆ. ಬಣ್ಣದ ವೇಷ ಸಿನೇಮಾದಲ್ಲಿ ಕೌಲಿ ಎಂಬ ದನ ಕಳೆದು ಹೋದಾಗ ಮತ್ತು ದ್ವೀಪ ಸಿನೇಮಾದಲ್ಲಿ

ಬೆಳ್ಳಿ ಎಂಬ ದನ ಕಳೆದು ಹೋದಾಗ ಅದನ್ನು ಒಂದು ಪ್ರಾಣಿಎಂದು ಭಾವಿಸದೇ ತನ್ನ ಮನೆಯ ಸದಸ್ಯ ಎಲ್ಲಿಯೋ ಹೋಗಿದ್ದಾನೆ ಎಂದು ಭಾವಿಸುವ ಸನ್ನಿವೇಶವನ್ನು ಸಿನೇಮಾದಲ್ಲಿ ತೋರಿಸಲಾಗಿದೆ. ಸಿನೇಮಾದಲ್ಲಿ ಜನಪದರು ಮಾನವೀಯತೆ ಮೆರೆಯುವುದು ಮತ್ತು ಮನುಷ್ಯತ್ವದ ಭಾವನೆ ಇರುವುದನ್ನು ಸಿನೇಮಾದಲ್ಲಿ ತೋರಿಸಲಾಗಿದೆ.

ದ್ವೀಪ ಸಿನೇಮಾದಲ್ಲಿ ಜನಪದ ಕಲಾವಿದರ ಜನಜೀವನ ಶೈಲಿ ಮತ್ತು ಅವರ ಆಚಾರ ವಿಚಾರ ಸಂಪ್ರದಾಯಗಳು ಅವರು ಪ್ರಕೃತಿಯಿಂದಲೇ ಜೀವನ ನಡೆಸಿ ಪ್ರಕೃತಿಯೊಂದಿಗೆ ಬಾಳಿ ಬದುಕುವ ಬಿದಿರನ್ನು ಅವರು ಪೂಜಿಸುತ್ತಿದ್ದರು, ಅವರ ಅನೇಕ ದಿನನಿತ್ಯದ ವಸ್ತುಗಳನ್ನು ಬಿದಿರಿನಿಂದ ತಯಾರಿಸಿಕೊಳ್ಳುತ್ತಿದ್ದರು. ಸೀತಾ ಪರ್ವತ ಎಂಬ ಒಂದು ಜಾಗವನ್ನು ಅವರು ರಾಮ ಸೀತೆಯರು ಬಂದು ನಡೆದಾಡುವ ಪ್ರದೇಶ ಎಂದೇ ನಂಬಿದ್ದರು, ಹಾಗಾಗಿ ಅಂತಹ ಕೆಲವು ಜಾಗಗಳನ್ನು ಪೂಜನೀಯ ಭಾವನೆಯಿಂದ ಕಾಣುತ್ತಿದ್ದರು. ಅವರ ಬದುಕಿನಲ್ಲಿಯೇ ಜನಪದವಾಗಿ ಬದುಕಿದವರು, ಅಂದರೆ ಕೃಷಿ ಮಾಡುವ ಸಂದರ್ಭದಲ್ಲಿ ಭತ್ತದ ಸಸಿಗಳನ್ನು ನಾಟಿ ಮಾಡುವಾಗ ಹಾಡುವ ಹಾಡು, ಬೇಜಾರಾದಾಗ ತೆಂಬರೆಯನ್ನು ನುಡಿಸುತ್ತಾ ಇದ್ದರು. ಕೆಲವೊಮ್ಮೆ ಕಷ್ಟ ಬಂದಾಗ ವೇಷದಾರಿಯಾಗಿದ್ದನ್ನೂ ಸಿನೇಮಾದಲ್ಲಿ ಹೇಳಿದ್ದಾರೆ.

ಬಣ್ಣದ ವೇಷ ಸಿನೇಮಾದಲ್ಲಿ ಚಳಿಗಾಲ ಮುಗಿಯುವ ಸಂದರ್ಭದಲ್ಲಿ ಮತ್ತು ಬೇಸಿಗೆ ಕಾಲ ಆರಂಭವಾಗುವ ಸಂದರ್ಭದಲ್ಲಿ ಕೃಷಿ ಕೆಲಸಗಳೆಲ್ಲವೂ ಮುಗಿದಾಗ ಯಕ್ಷಗಾನ ಬಯಲಾಟ ಆರಂಭವಾಗುವ ಮತ್ತು ಜನಪದ ಕಲಾವಿದರು ತಮ್ಮನ್ನು ತಾವು ಜನಪದ ಕಲೆಗಳಿಗೆ ಅರ್ಪಿಸಿಕೊಂಡು ಹಗಲು ಸಂಪೂರ್ಣ ಕಲೆಗೆ ತಯಾರಿ ನಡೆಸುವುದು, ಮತ್ತು ರಾತ್ರಿಯಿಡೀ ಪ್ರಸಂಗದಲ್ಲಿ ತಲ್ಲೀನರಾಗುವುದು. ಸಿನೇಮಾ ಅವರ ಜೀವನ ಶೈಲಿಯನ್ನು ಸಿನೇಮಾ ಮಾತನಾಡುತ್ತಾ ಹೋಗುತ್ತದೆ. ಹಾಗೆಯೇ ಮಳೆಗಾಲದಲ್ಲಿ ಮೇಳದವರು ವೇಷ ಧರಿಸುವುದಿಲ್ಲ. ಬದಲಾಗಿ ತಮ್ಮ ಕೃಷಿ ಕೆಲಸದಲ್ಲಿ ತಲ್ಲೀನರಾಗಿರುತ್ತಾರೆ. ಆದರೆ ಸಿನೇಮಾದಲ್ಲಿ ಯಕ್ಷಗಾನದಲ್ಲಿ ಕೆಲವರ ಮೈಮೇಲೆ ದೈವ ಬರುತ್ತದೆ, ಆ ದೈವದ ಆಗಮನವಾದವರು ಶ್ರೇಷ್ಠರು. ಅವರಿಗೆ ನೇಮ ಮತ್ತು ನಿಷ್ಠೆಗಳಿರುತ್ತವೆ ಇದನ್ನು ಜನಪದರು ಪಾಲಿಸುತ್ತಾ ಬಂದಿದ್ದಾರೆ ಎನ್ನುವ ಗಂಭೀರ ವಿಷಯವನ್ನು ಸಿನೇಮಾ ಹೇಳುತ್ತದೆ, ಅದರಲ್ಲಿಯೂ ಸಹಾ ಜುಂಜುಟ್ಟಿ ಎಂಬ ದೈವ ವೇಷದಾರಿಯೊಬ್ಬನನ್ನು ಜನರು ಎಷ್ಟೊಂದು ನೇಮ ನಿಷ್ಠೆಯಿಂದ ನೋಡುತ್ತಿದ್ದರು ಎಂಬುದನ್ನು ಸಿನೇಮಾದಲ್ಲಿ ಬಿಂಬಿಸಲಾಗಿದೆ.

ಬಣ್ಣದ ವೇಷ ಸಿನೇಮಾದಲ್ಲಿ ಯಕ್ಷಗಾನ ಕಲೆಯಲ್ಲಿನ ಜುಂಜುಟ್ಟಿ ದೈವದ ನರ್ತನ, ರಾಮನ ವೇಷ, ಕೃಷ್ಣನ ವೇಷವನ್ನು ಬಿಂಬಿಸಲಾಗಿದೆ. ಚಿಕ್ಕ ಮಕ್ಕಳಿರುವಾಗ

ರಾಮಾರ್ಜುನರ ವೇಷದಾರಿಯಾಗಿ ಜನಪದ ಕಲಾವಿದರಾಗಲು ಚಿಕ್ಕ ಮಕ್ಕಳು ಸಣ್ಣ ವಯಸ್ಸಿನಲ್ಲಿಯೇ ಆಸಕ್ತಿಯಿಂದ ಆರಂಭಿಸುವುದನ್ನು ಸಿನೇಮಾ ಮಾತನಾಡುತ್ತದೆ. ಒಟ್ಟಿನಲ್ಲಿ ಧಾರ್ಮಿಕ ಕಲೆಗಳು ಹೇಗೆ ಧಾರ್ಮಿಕ ಕಲೆಗಳಾಗಿವೆ ಮತ್ತು ದೈವದ ಕಲೆಯಾಗಿವೆ ಎಂಬುದನ್ನುಎರಡೂ ಸಿನೇಮಾದಲ್ಲಿ ತೋರಿಸಲಾಗಿದೆ.

**ಕಲೆಗಳು ಕೊಡುವ ಸಂದೇಶ:**

ದ್ವೀಪ ಸಿನೇಮಾದಲ್ಲಿ ಮೊದಲಿನಿಂದಲೂ ಸಹಾ ಅನೇಕ ದೈವದ ನಂಬಿಕೆಗಳು ಧಾರ್ಮಿಕ ಆಚರಣೆಗಳು ಹೀಗೆ ಅನೇಕ ಕೆಲಸಗಳು ಯಶಸ್ಸಾದರೆ ಅದಕ್ಕೆಲ್ಲ ದೈವ ಕಾರಣ. ನಾವೆಲ್ಲರೂ ಒಂದು ನಿಮಿತ್ತ ಮಾತ್ರ ಎಂಬ ನಂಬಿಕೆ ಮೊದಲಿನಿಂದಲೂ ಇದೆ ಆದರೆ ಕೊನೆಯಲ್ಲಿ ದುಗ್ಗಜ್ಜನ ಮಗ ಸೊಸೆ ಇಬ್ಬರೂ ಹೆಬ್ಬಾರರ ಮನೆಯಲ್ಲಿ ವಾಸವಾಗಿದ್ದಾಗ ಸಿನೇಮಾದ ಕೊನೆಯ ಭಾಗದಲ್ಲಿ 'ಹುಲಿ ಬರದಂತೆ ಕಾದದ್ದು ನಾನು ಕಾದಿದ್ದು' ಎಂದು ನಾಗಿ ಹೇಳಿದಾಗ ಗಣಪಯ್ಯ ಅದೆಲ್ಲ ದೈವ ಮಾಡಿದ್ದು ನಾವೆಲ್ಲರೂ ನಿಮಿತ್ತ ಮಾತ್ರ ಎಂದು ಹೇಳುತ್ತಾನೆ. ಮುಂದುವರೆದು ಸಂಪೂರ್ಣ ಡ್ಯಾಂ ತುಂಬಿದಾಗ ನಾವು ಬದುಕಿದ್ದು, ನಾವು ವಾಸವಿದ್ದ ಮನೆಯ ಬಳಿ ನೀರು ಬಾರದೇ ಇದ್ದದ್ದು ಎಲ್ಲವೂ ದೈವ ಕಾಪಾಡಿದ್ದು, ನಾವು ಸಂಪೂರ್ಣ ನಿಮಿತ್ತ ಮಾತ್ರ ಎಂದು ಹೇಳುವ ಮಾತು ಇವುಗಳನ್ನು ಸಿನೇಮಾದಲ್ಲಿ ತೋರಿಸಿ ಮೂಢನಂಬಿಕೆಯನ್ನು ಬಿಂಬಿಸಲಾಗಿದೆ.

ಇಲ್ಲಿ ಮುಖ್ಯವಾಗಿ ಪ್ರತೀ ಜನಪದ ಕಲೆಗಳನ್ನು ಅನಾವರಣ ಮಾಡುವಾಗ ದೇವರ ಹೆಸರುಗಳಲ್ಲಿ ಜನಪದ ಕಲಾ ಪ್ರಕಾರಗಳನ್ನು ನಡೆಸುವುದು ಸಾಮಾನ್ಯ. ಏಕೆಂದರೆ ಪ್ರತೀ ಜನಪದ ಕಲೆಗಳಲ್ಲಿ ಜನಪದರು ತಾವು ಮಾಡುವ ಕಾಯಕವನ್ನು ದೇವರಿಗೆ ಮಾಡುವ ಕಾಯಕ ಎಂದು ಕೆಲಸದಲ್ಲಿ ದೇವರನ್ನು ಕಾಣುವಂತೆ ಸಿನೇಮಾದಲ್ಲಿ ಬಿಂಬಿಸಲಾಗಿದೆ. ಹಾಗಾಗಿ ಆಚರಣೆಗಳನ್ನು ಧಾರ್ಮಿಕವಾಗಿಯೇ ಸಿನೇಮಾದಲ್ಲಿ ಬಿಂಬಿಸಲಾಗಿದೆ.

ದ್ವೀಪ ಸಿನೇಮಾದಲ್ಲಿ ಜನಪದ ಕಲೆಗಳನ್ನು ನಾಟಿ ಮಾಡುವಾಗ ಹಾಡನ್ನು ಹೇಳುತ್ತಾ ನಾಟಿ ಮಾಡುವುದು, ಜನರು ಕಷ್ಟ ಹೇಳಿಕೊಂಡು ಬಂದಾಗ ಭೂತ ವೇಷಧಾರಿ ಪರಿಹಾರ ಹೇಳುವುದು, ಅದಲ್ಲದೇ ತೆಂಬರೆಯನ್ನು ಸಂಪೂರ್ಣ ಸಿನೇಮಾದಲ್ಲಿ ಆಗಾಗ ಅಂದರೆ ಬೇಜಾರಿನ ಸಮಯದಲ್ಲಿ ನುಡಿಸುವುದನ್ನು ಸಿನೇಮಾದಲ್ಲಿ ತೋರಿಸಲಾಗಿದೆ. ಬಣ್ಣದ ವೇಷ ಸಿನೇಮಾದಲ್ಲಿ ಯಕ್ಷಗಾನವನ್ನು ಆಡುವಾಗ ಅದಕ್ಕಿರುವ ನೇಮ ನಿಷ್ಠೆಗಳನ್ನು ಜನಪದರು ಹೇಗೆ ಪಾಲಿಸಿಕೊಂಡು ಬಂದಿದ್ದಾರೆಂದು ತೋರಿಸಲಾಗಿದೆ.

ಬಣ್ಣದ ವೇಷ ಸಿನೇಮಾದಲ್ಲಿ ವೇಷಧಾರಿ ಶಂಭು ಹೊಗೆಸೊಪ್ಪು (ತಂಬಾಕು) ಹಾಕಿ ಯಕ್ಷಗಾನ ಮಾಡಲು ಬಣ್ಣ ಹಚ್ಚಿದ್ದರಿಂದಾಗಿ ವೇಷದಾರಿಯಾಗಿ

ಕುಣಿಯುತ್ತಿರುವಾಗಲೇ ತಲೆ ಸುತ್ತಿ ಕೆಳಗೆ ಬಿದ್ದನು. ಕೊನೆಗೆ ಮಾಹಾಬಲ ಎಂಬ ಸಹ ವೇಷಧಾರಿ ನಿಜವಾಗಿಯೂ ಆತನ(ಶಂಭು) ಮೇಲೆ ದೈವ ಬಂದಂತೆ ನಟಿಸುತ್ತಾನೆ. ನಂತರದಲ್ಲಿ ಶಂಭುವನ್ನು ಜುಂಜುಟ್ಟಿಯಾಗಿಯೇ ಜನರು ಹೆದರಿಕೆಯಿಂದ ನೋಡುತ್ತಿದ್ದರು. ಶಂಭು ದೇವಸ್ಥಾನಕ್ಕೆ ದೇಣಿಗೆ ಕೇಳಲು ಬಂದಾಗ ಅನೇಕರು ಜುಂಜುಟ್ಟಿ ದೈವ ನಮಗೇನಾದರೂ ಕೆಡುಕು ಮಾಡಬಹುದು ಎಂದು ಹೆದರಿ ಏನೂ ಮಾತನಾಡದೇ ದೇವಸ್ಥಾನಕ್ಕೆ ದೇಣಿಗೆಯನ್ನು ನೀಡುತ್ತಿದ್ದರು. ಒಮ್ಮೆ ಶಂಭು ಹಳೆಯ ಮೇಳದಲ್ಲಿ ವೇಷಧಾರಿಯಾಗಿದ್ದಾಗ ಅವನ ಜೊತೆಗೆ ಜಗಳ ಮಾಡಿಕೊಂಡಿದ್ದ ಶೇಷಪ್ಪ ಆಟ ನಡೆಯುವಾಗಲೇ ಹಿಡಿ ಶಾಪ ಹಾಕಿ ಆತನನ್ನು ಹೀಯಾಳಿಸಿದ್ದ, ಇದಾದ ಬಳಿಕ ಅದೇ ಶೇಷಪ್ಪ ಲಕ್ವಾ ಹೊಡೆದು ಬಿದ್ದನು. ಶಂಭುವನ್ನು ನೋಡಿ ಜನರು ಇನ್ನೂ ಹೆಚ್ಚಿನದಾಗಿ ಹೆದರಲು ಆರಂಭಿಸಿದರು. ಹೀಗೆ ಸಿನೇಮಾದಲ್ಲಿ ಮೂಢನಂಬಿಕೆಯನ್ನು ಧಾರ್ಮಿಕವಾಗಿ ನಡೆಸುವ ಜನಪದ ಕಲೆಗಳೊಂದಿಗೆ ಜನರಲ್ಲಿರುವ ಮೂಢನಂಬಿಕೆಯನ್ನೂ ಬಿಂಬಿಸಿದ್ದಾರೆ.

**ಫಲಿತಾಂಶ:**

ಸಿನೇಮಾ ಮಲೆನಾಡಿನ ಜನಪದ ಕಲೆಯನ್ನು ಮುಂದೆ ಬರುವ ಹೊಸ ತಲೆಮಾರುಗಳಿಗೆ ಹಿಡಿದಿಟ್ಟು ತೋರಿಸುವ ಒಂದು ದಾಖಲೆಯಾಗಿದೆ. ಇಪ್ಪತ್ತನೇ ಶತಮಾನದಲ್ಲಿ ಮಲೆನಾಡು ಪ್ರಾಂತ್ಯದ ಜನಪದ ಕಲಾವಿದರು ಬದುಕು ಕಟ್ಟಿಕೊಳ್ಳುವುದಕ್ಕಿಂತಲೂ ಹೆಚ್ಚಾಗಿ ಹವ್ಯಾಸವಾಗಿ ತೆಗೆದುಕೊಂಡು ಹೋಗುವವರಿದ್ದಾರೆ. ಈ ಅಧ್ಯಯನದ ಪ್ರಮುಖ ಫಲಿತಾಂಶಗಳನ್ನು ಕೆಳಗಿನಂತೆ ಪಟ್ಟಿ ಮಾಡಬಹುದು.

1. ಆಯ್ದ ಎರಡೂ ಸಿನಿಮಾಗಳೂ ದಕ್ಷಿಣ ಕನ್ನಡ ಮತ್ತು ಮಲೆನಾಡು ಭಾಗದ ಪ್ರಮುಖವಾದ ಜನಪದ ಕಲೆಗಳಾದ ಯಕ್ಷಗಾನ ಮತ್ತು ಭೂತಕೋಲ ಕಲೆಗಳನ್ನು ಮುಖ್ಯವಾಗಿ ನಿಖರವಾಗಿ ದಾಖಲಿಸುವೆ.
2. ಆಯ್ದ ಸಿನೇಮಾಗಳಲ್ಲಿ ಚಿತ್ರಿಸಲಾದ ಭಾರತದ ಮೂಲ ಪರಂಪರೆ ಮತ್ತು ಜನಪದರ ಜೀವನ ಶೈಲಿಯನ್ನು ಸಿನೇಮಾಗಳು ದಾಖಲೀಕರಿಸಿವೆ.
3. ಸಿನೇಮಾಗಳು ಜನಪದ ಕಲೆಗಳನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸಿಡುವ ಒಂದೊಳ್ಳೆಯ ಮಾಧ್ಯಮವಾಗಿವೆ.
4. ಸಿನೇಮಾಗಳಲ್ಲಿ ಜನಪದ ಕಲೆಗಳ ಮೂಲ ಧಾಟಿ ಸಾಂಪ್ರದಾಯಿಕವಾಗಿತ್ತು ಎಂಬುದು ಸಿನೇಮಾಗಳಿಂದ ತಿಳಿಯುತ್ತದೆ.
5. 20ನೇ ಶತಮಾನದ ಅಂತ್ಯದಲ್ಲಿ ಜನಪದ ಕಲಾವಿದರಿಗೆ ಕಷ್ಟಗಳಿದ್ದರೂ ಸಹಾ ಭಕ್ತಿಯಿಂದ ಕಲೆಗಳನ್ನು ನಡೆಸಿಕೊಂಡು ಹೋಗುತ್ತಿದ್ದರು ಎಂಬ ಸೂಕ್ಷ್ಮ ವಿಚಾರ ಸಿನೇಮಾದಿಂದ ತಿಳಿದು ಬರುತ್ತದೆ.

**ಉಪಸಂಹಾರ:**

ಗಿರೀಶ್ ಕಾಸರವಳ್ಳಿ ಅವರು ನಿರ್ದೇಶಿಸಿದ ದ್ವೀಪ ಮತ್ತು ಬಣ್ಣದ ವೇಷ ಸಿನೇಮಾಗಳು ಎರಡೂ ಮಲೆನಾಡಿನ ಸಹಜವಾದ ಜನಪದ ಕಲೆಗಳನ್ನು ಬಿಂಬಿಸುವುದರ ಜೊತೆಗೆ ಸ್ಥಳೀಯ ಜನಪದ ಸಂಸ್ಕೃತಿಯನ್ನು ಅವರ ಬದುಕು ಮತ್ತು ಬವಣೆಗಳೊಂದಿಗೆ ಬಿಂಬಿಸಿವೆ. ಇಲ್ಲಿ ಬಿಂಬಿಸಿದ ಜನಪದ ಕಲೆಗಳು ಒಂದೊಳ್ಳೆಯ ದಾಖಲೆಗಳಾಗಿ ಹೊಸ ಪೀಳಿಗೆಗಳಿಗೆ ಉಳಿಯುತ್ತವೆ ಎಂದು ನಿರ್ದೇಶಕರಾದ ಗಿರೀಶ್ ಕಾಸರವಳ್ಳಿ, ಜೋಗಿಯರ ಹಾಡುಗಳನ್ನು ಹಾಡುವ ಜನಪದ ಕಲಾವಿದರಾದ ಗುಡ್ಡಪ್ಪಜೋಗಿ ಅವರು ಮತ್ತು ಮೈಸೂರಿನ ಜನಪದ ಹಾಡುಗಾರರಾದ ಅಮ್ಮಾ ರಾಮಚಂದ್ರ ಅವರೂ ಹೇಳಿದ್ದಾರೆ. ಪ್ರಕೃತಿ ಎಷ್ಟು ಶ್ರೀಮಂತವಾಗಿತ್ತು, ಒಟ್ಟಾರೆ ಸಿನೇಮಾದಲ್ಲಿ ಅಂತಹ ಪ್ರಕೃತಿಯ ನಡುವೆ ಜನಪದ ಕಲೆಗಳು ಹೇಗೆ ಜನಪದರಲ್ಲಿ ಬಾಯಿಂದ ಬಾಯಿಗೆ ಹರಿದಾಡುತ್ತಿವೆ ಎಂದು ತೋರಿಸಲಾಗಿದೆ. ಸಿನೇಮಾ ಒಂದು ಶಕ್ತಿಶಾಲಿ ಮಾಧ್ಯಮವಾದ್ದರಿಂದ ಮುಂದಿನ ಪೀಳಿಗೆಗೆ ಒಂದೊಳ್ಳೆಯ ದಾಖಲೆಯಾಗುವ ಜೊತೆಗೆ, ನೋಡುಗರ ತಲೆಯಲ್ಲಿ ಒಮ್ಮೆ ನೋಡಿದರೆ ಅಚ್ಚಳಿಯದಂತೆ ಉಳಿಯುವ ಒಂದು ಮಾಧ್ಯಮವಾಗಿದೆ. ಇದರಿಂದ ಎಷ್ಟೇ ತಲೆಮಾರುಗಳು ಕಳೆದರೂ ಸಹಾ ಸಿನೇಮಾ ಎಂಬ ಶಕ್ತಿಶಾಲಿ ಮಾಧ್ಯಮ ಜನಪದ ಕಲೆಗಳನ್ನು ಜೀವಂತವಾಗಿ ಇಡುತ್ತಿದೆ. ಜನಪದ ಕಲೆಗಳನ್ನು ಸಿನೇಮಾದಲ್ಲಿ ಬಿಂಬಿಸಿದ್ದು ಇಪ್ಪತ್ತನೇ ಶತಮಾನದ ಮಧ್ಯದಲ್ಲಿ ಬಯಲಾಟದ ಸ್ಥಿತಿಗತಿಗಳು ಯಾವ ರೀತಿಯಲ್ಲಿದ್ದವು ಮತ್ತು ಯಕ್ಷಗಾನವನ್ನು ಜನರು ಅದೆಷ್ಟು ಆಸಕ್ತಿಯಿಂದ ಸ್ವೀಕರಿಸುತ್ತಿದ್ದರು ಎಂಬುದನ್ನು ಚಿತ್ರಿಸಲಾಗಿದೆ. ಹಾಗೆಯೇ ಯಕ್ಷಗಾನ ಕಲಾಬಿದರ ಬದುಕು ಮತ್ತು ಬವಣೆಗಳು, ಯಕ್ಷಗಾನಕ್ಕಾಗಿ ಕಲಾವಿದರು ಅದೆಷ್ಟು ಶ್ರಮವಹಿಸುತಿದ್ದರು ಎಂಬುದನ್ನು ಸಿನೇಮಾದಲ್ಲಿ ಬಿಂಬಿಸಲಾಗಿದೆ. ಮಲೆನಾಡಿನ ಯಕ್ಷಗಾನ ಕಲೆ ಹೇಗೆ ಜನಜನಿತವಾಗಿದೆ ಎಂಬುದನ್ನು ಸಿನೇಮಾದಲ್ಲಿ ಅದ್ಭುತವಾಗಿತೋರಿಸಲಾಗಿದೆ.

ದ್ವೀಪ ಸಿನೇಮಾದಲ್ಲಿ ಭೂತಕೋಲದ ಸಂಪೂರ್ಣ ಚಿತ್ರಣವನ್ನು ತೋರಿಸಲಾಗಿದೆ. ಇದರ ಜೊತೆಗೆ ಮಲೆನಾಡಿನ ಜನರು ಭೂತಗಳನ್ನು ಆರಾಧಿಸುತ್ತಿದ್ದರು ಮತ್ತು ಅದನ್ನು ಜೀವನದ ಒಂದು ಭಾಗವಾಗಿರಿಸಿಕೊಂಡಿದ್ದರು ಎಂದು ಸಿನೇಮಾದಲ್ಲಿ ತೋರಿಸಿದ್ದಾರೆ. ಇಪ್ಪತ್ತನೇ ಶತಮಾನದ ಕೊನೆಗೆ ದೇಶದ ಗ್ರಾಮೀಣ ಜನರು ಅದರಲ್ಲಿಯೂ ಸಹ್ಯಾದ್ರಿ ಪರ್ವತ ಶ್ರೇಣಿಯಲ್ಲಿ ವಾಸವಿದ್ದ ಜನರು ಜನಪದ ಕಲೆಗಳನ್ನು ಕೃಷಿಯಲ್ಲಿ ಮತ್ತು ತಮ್ಮ ಮನೆಯಲ್ಲಿ ಹೇಗೆ ಅಳವಡಿಸಿಕೊಂಡಿದ್ದರು ಎಂಬ ಸೂಕ್ಷ್ಮ ವಿಚಾರವನ್ನು ದ್ವೀಪ ಸಿನೇಮಾ ಮಾತನಾಡುತ್ತದೆ. ಭೂತಕೋಲ ಕಲೆಯನ್ನೇ ಪೂಜಿಸಿ, ಆರಾಧಿಸಿ, ನಂಬಿಕೊಂಡು

ಅದನ್ನೇ ಜೀವನದ ಒಂದು ಭಾಗವಾಗಿರಿಸಿಕೊಂಡ ಒಂದು ಕುಟುಂಬ ಒಂದನ್ನು ಸಿನೇಮಾದಲ್ಲಿ ಬಿಂಬಿಸುತ್ತಾ ಮಲೆನಾಡಿನ ಅನೇಕ ಕುಟುಂಬಗಳು ಜನಪದ ಕಲೆಗಳನ್ನು ಆರಾಧಿಸುತ್ತಿವೆ. ಅಂತಹ ಅನೇಕ ಕುಟುಂಬಗಳು ಇಂದು ಆಧುನೀಕರಣದಿಂದ ತಮ್ಮ ಮೂಲ ನೆಲೆಯನ್ನೇ ಕಳೆದುಕೊಳ್ಳುತ್ತಿರುವ ಗಂಭೀರ ಸಂಗತಿಯನ್ನು ಪ್ರಸ್ತುತ ಸಿನೇಮಾದಲ್ಲಿ ಸ್ಪಷ್ಟವಾಗಿ ಬಿಂಬಿಸಿದ್ದಾರೆ. ಒಟ್ಟಾರೆ ಸರ್ಕಾರಗಳು ಮೂಲ ಜನಪದ ಕಲೆಗಳನ್ನು ಕಾಪಾಡಿಕೊಂಡು ಬರುತ್ತಿರುವ ಜನಪದರ ಮೂಲ ನೆಲೆಯನ್ನು ಕಸಿದುಕೊಳ್ಳುತ್ತಿರುವ ಬಗ್ಗೆ ಸಿನೇಮಾ ಗಮನ ಸೆಳೆಯುತ್ತಿದೆ. ದುಗ್ಗಜ್ಜ ಮತ್ತು ಆತನ ಕುಟುಂಬ ಹೀಗೆ ಒಂದು ಕುಟುಂಬದ ಉದಾಹರಣೆಯನ್ನಿಟ್ಟುಕೊಂಡು ಮಲೆನಾಡಿನ ಅನೇಕ ಕುಟುಂಬಗಳು ಆಧುನೀಕರಣದ ಹೊಡೆತಕ್ಕೆ ಸಿಲುಕಿದ ಅನೇಕ ಕುಟುಂಬಗಳ ಇಂದಿನ ಶೋಚನೀಯ ಪರಿಸ್ಥಿತಿಯನ್ನು ಸಿನೇಮಾದಲ್ಲಿ ಬಿಂಬಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು:**


1. ರಾಮಚಂದ್ರಪ್ಪ ಬಿ., (2004), ಸಿನಿಮಾ ಒಂದು ಜನಪದ ಕಲೆ, ಬೆಂಗಳೂರು: ಜೈ ಪ್ರಿಂಟರ್ಸ್.
2. ಕಾಸರವಳ್ಳಿ ಜಿ., (1983), ಸಿನಿಮಾ ಕಲೆ-ನೆಲೆ, ಬೆಂಗಳೂರು: ನವಕರ್ನಾಟಕ ಪಬ್ಲಿಕೇಷನ್ ಲಿಮಿಟೆಡ್.
3. ಲಕ್ಷ್ಮೀನಾರಾಯಣ ವಿ.ಎನ್., (2016), ಎರಡು ಕಣ್ಣು ಸಾಲದು, ಬೆಂಗಳೂರು: ಚಿಂತನ ಪುಸ್ತಕ.
4. Rego, R. (2011). Kannada Cinema: Casteism in Girish Kasaravalli's Films. Journal of Creative Communications, 6(1-2), 203-214.
5. Bangari, B. Y.(2019) A GLANCE OVER THE CULTURAL IDENTITY OF DALIT FOLK ARTISTS AND ORAL FOLK EPICS IN KARNATAKA. NEW HORIZONS OF DALIT CULTURE AND LITERATURE, 1.
6. Babu, P. K., Shruti, J. R., CK, H. R., Dandekar, A., & Singh, S. (2024, October). Sentiment Analysis of Movie Reviews in Regional Language: Kannada. In 2024 5th International Conference on Circuits, Control, Communication and Computing (I4C) (pp. 148-153). IEEE.
7. Palakkal, S. E. (2019). FEATURE FILMS-A CATALYST TO FOLKLORE CULTURE: A STUDY ON HINDI, TAMIL AND MALAYALAM FILMS.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.